1

# ಅರುಣಾ ಸಹಕಾರ ಬ್ಯಾಂಕ್ ನಿಯಮಿತ,

708, 15ನೇ ಮುಖ್ಯ ರಸ್ತೆ, "ಎ" ಸೆಕ್ಟರ್, ಯಲಹಂಕ ಉಪನಗರ, ಬೆಂಗಳೂರು-560064
ಕ್ರಮ ಸಂಖ್ಯೆ:- ಎಆರ್‌ಬಿ.45/ನೋಂದಣಿ ಸಂಖ್ಯೆ :24898/1999-2000/ದಿನಾಂಕ:17-09-1999.

## ತಿಳುವಳಿಕೆ ಪತ್ರ

ಮಾನ್ಯ ಸದಸ್ಯರಲ್ಲಿ ವಿನಂತಿ,

ಅರುಣಾ ಸಹಕಾರ ಬ್ಯಾಂಕಿನ ಮುಂದಿನ 5 ವರ್ಷಗಳ ಅವದಿಗೆ ಆಡಳಿತ ಮಂಡಳಿಯ ನಿರ್ದೇಶಕರ ಆಯ್ಕೆಗಾಗಿ ಚುನಾವಣೆ ನಡೆಸಲು ಸಹಕಾರ ಚುನಾವಣಾ ಪ್ರಾಧಿಕಾರ ರಿಟರ್ನಿಂಗ್ ಅಧಿಕಾರಿಯನ್ನು ನೇಮಿಸಿದ್ದು, ಸದರಿ ರಿಟರ್ನಿಂಗ್ ಅಧಿಕಾರಿಯವರು ನಿರ್ದೇಶಕರ ಆಯ್ಕೆಗಾಗಿ ದಿನಾಂಕ:-26-01-2025 ರಂದು ಚುನಾವಣೆಯನ್ನು ನಿಗದಿ ಪಡಿಸಿ ನೀಡಿರುವ ಚುನಾವಣಾ ವೇಳಾ ಪಟ್ಟಿ ಮತ್ತು ಸೂಚನೆಗಳನ್ನು ಲಗತ್ತಿಸಿದೆ. ಮಾನ್ಯ ಸದಸ್ಯರು ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆಂದು ಕೋರಲಾಗಿದೆ.

ಬೆಂಗಳೂರು

ದಿನಾಂಕ:-07-01-2025

ಆಡಳಿತ ಮಂಡಳಿಯ ಪರವಾಗಿ

ಸಹಿ/-

ವ್ಯವಸ್ಥಾಪಕರು

ಸೂಚನೆಗಳು:- ಗುರುತಿನ ಚೀಟಿಯನ್ನು ಪಡೆಯದ ಸದಸ್ಯರು 2 ಭಾವ ಚಿತ್ರಗಳನ್ನು ನೀಡಿ ಬ್ಯಾಂಕಿನ ಕೆಲಸದ ವೇಳೆಯಲ್ಲಿ ಪಡೆಯಬಹುದು.

ರಿಟರ್ನಿಂಗ್ ಆಫೀಸರ್, ಅರುಣಾ ಸಹಕಾರ ಬ್ಯಾಂಕ್ ಲಿ., ನಂ.708, 15ನೇ ಮುಖ್ಯ ರಸ್ತೆ, 'ಎ' ಸೆಕ್ಟರ್, 3ನೇ ಫೇಸ್, ಎಲ್.ಐ.ಸಿ. ಆಫೀಸ್ ರಸ್ತೆ, ಯಲಹಂಕ ಉಪನಗರ, ಬೆಂಗಳೂರು–64 ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಇವರ ನಡವಳಿಗಳು

ಅರುಣಾ ಸಹಕಾರ ಬ್ಯಾಂಕ್ ಲಿ., ನಂ.708, 15ನೇ ಮುಖ್ಯ ರಸ್ತೆ, 'ಎ' ಸೆಕ್ಟರ್, 3ನೇ ಫೇಸ್, ಎಲ್.ಐ.ಸಿ. ಆಫೀಸ್ ರಸ್ತೆ, ಯಲಹಂಕ ಉಪನಗರ, ಬೆಂಗಳೂರು–64 ಈ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರುಗಳನ್ನು ಆಯ್ಕೆ ಮಾಡಲು ಸಾರ್ವತ್ರಿಕ ಚುನಾವಣೆ ನಡೆಸುವ ಸಲುವಾಗಿ ಸಾಮಾನ್ಯ/ಹಿಂದುಳಿದ ವರ್ಗ/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ, ಈ ಸ್ಥಾನಗಳಿಗೆ ಚುನಾವಣೆಯನ್ನು ದಿನಾಂಕ: 26–01–2025 ರಂದು ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ನಡೆಸಲಾಗುವುದೆಂದು ಕೆಳಕಂಡಂತೆ ಸೂಚನಾ ಪತ್ರ ನೀಡಲಾಗಿದೆ.

ಕ್ರಮಾಂಕ, ಎ.ಆರ್.ಬಿ. 24898–99–2000 ದಿನಾಂಕ 17-9-99

## ಚುನಾವಣೆಯ ವೇಳಾ ಪಟ್ಟಿ

| | ವಿವರ | ದಿನಾಂಕ, ಸಮಯ ಮತ್ತು ಸ್ಥಳ |
|---|---|---|
| 1 | ಸ್ಪರ್ದಿಸಲು ಇಚ್ಚಿಸುವಂತಹ ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸಲು ಪ್ರಾರಂಭದ ದಿನಾಂಕ | ದಿನಾಂಕ. 14–01–2025 ರಿಂದ ಪ್ರಾರಂಭ 11.30 ರಿಂದ 4.00 ಗಂಟೆಯವರೆಗೆ ಬ್ಯಾಂಕಿನ ಕಛೇರಿಯಲ್ಲಿ |
| 2 | ಸ್ಪರ್ದಿಸಲು ಇಚ್ಚಿಸುವಂತಹ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲು ಕಡೆಯ ದಿನಾಂಕ (ನಿಯಮ 14–ಎ) | ದಿನಾಂಕ. 18–01–2025 ರಂದು 11.00 ರಿಂದ 4.00 ಗಂಟೆಯವರೆಗೆ ಬ್ಯಾಂಕಿನ ಕಛೇರಿಯಲ್ಲಿ |
| 3 | ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳ ಪರಿಶೀಲನೆ (ನಿಯಮ 14–ಬಿ) | ದಿನಾಂಕ. 19–01–2025 ರಂದು ಮಧ್ಯಾಹ್ನ 12.00 ಗಂಟೆಗೆ ಬ್ಯಾಂಕಿನ ಕಛೇರಿಯಲ್ಲಿ |
| 4 | ರಿಟರ್ನಿಂಗ್ ಅಧಿಕಾರಿಯಿಂದ ಸಿಂಧುತ್ವ ಹೊಂದಿರುವ ನಾಮನಿರ್ದೇಶಿತ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ 14–ಬಿ(4)) | ದಿನಾಂಕ. 19–01–2025 ರಂದು ನಾಮ ಪತ್ರಗಳ ಪರಿಶೀಲನೆ ನಂತರ ಬ್ಯಾಂಕಿನ ಕಛೇರಿಯಲ್ಲಿ |
| 5 | ಉಮೇದುವಾರರಿಂದ ನಾಮಪತ್ರವನ್ನು ಹಿಂಪಡೆಯಲು ಕ್ವಡೆಯ ದಿನಾಂಕ (ನಿಯಮ 14–ಸಿ) | ದಿನಾಂಕ. 20–01–2025 ರಂದು ಮಧಾಹ್ನ 3.00 ಗಂಟೆಯವರೆಗೆ ಬ್ಯಾಂಕಿನ ಕಛೇರಿಯಲ್ಲಿ |
| 6 | ರಿಟರ್ನಿಂಗ್ ಅಧಿಕಾರಿಯಿಂದ ಸ್ಪರ್ದಾ ಕಣದಲ್ಲಿ ಉಳಿದಿರುವ ಉಮೇದುವಾರರ ಪಟ್ಟಿಯ ಪ್ರಕಟಣೆ (ನಿಯಮ 14–ಡಿ) | ದಿನಾಂಕ. 20–01–2025 ರಂದು ಮಧಾಹ್ನ 3.00 ಗಂಟೆಯ ನಂತರ ಬ್ಯಾಂಕಿನ ಕಛೇರಿಯಲ್ಲಿ |
| 7 | ಅವಶ್ಯಕವಿದ್ದಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ ಅಭ್ಯರ್ಥಿಗಳಿಗೆ ಚಿಹ್ನೆಗಳ ಹಚಿಚಿಕೆ (ನಿಯಮ 14–ಇ) | ದಿನಾಂಕ. 20–01–2025 ರಂದು ಮಧಾಹ್ನ 3.00 ಗಂಟೆಯ ನಂತರ ಬ್ಯಾಂಕಿನ ಕಛೇರಿಯಲ್ಲಿ |
| 8 | ಸ್ಪರ್ದಾ ಕಣದಲ್ಲಿ ಇರುವ ಉಮೇದುವಾರರ ಪಟ್ಟಿಯು ಚಿಹ್ನೆಯೊಂದಿಗೆ ಪ್ರಕಟಣೆ (ನಿಯಮ 14–ಇ ಮತ್ತು 14–ಎಫ್) | ದಿನಾಂಕ. 22–01–2025 ರಂದು ಬ್ಯಾಂಕಿನ ಕಛೇರಿಯಲ್ಲಿ |

| | | |
|---|---|---|
| 9 | ಮತದಾನದ ದಿನಾಂಕ ಮತ್ತು ಸಮಯ | ದಿನಾಂಕ. 26-01-2025 ರಂದು ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ಬ್ಯಾಂಕಿನ ಕಛೇರಿಯಲ್ಲಿ |
| 10 | ಮತ ಎಣಿಕೆಯ ದಿನಾಂಕ ಮತ್ತು ಸಮಯ | ದಿನಾಂಕ. 26-01-2025 ರಂದು ಮತದಾನ ಮುಗಿದ ನಂತರ |
| 11 | ರಿಟರ್ನಿಂಗ್ ಅಧಿಕಾರಿಯಿಂದ ಫಲಿತಾಂಶ ಘೋಷಣೆ | ಮತ ಎಣಿಕೆಯು ಮುಗಿದ ನಂತರ |

**ಸೂಚನೆಗಳು:**

1. ಬ್ಯಾಂಕಿನ ಆಡಳಿತ ಮಂಡಳಿಗೆ ಒಟ್ಟು 13 ನಿರ್ದೇಶಕರನ್ನು ಮಾತ್ರ ಚುನಾಯಿಸಬೇಕಾಗುತ್ತದೆ.

| | | |
|---|---|---|
| 1 | ಸಾಮಾನ್ಯ ವರ್ಗ | 07 ಸ್ಥಾನ |
| 2 | ಪರಿಶಿಷ್ಟ ಜಾತಿ ವರ್ಗದ ಮೀಸಲು ಸ್ಥಾನ | 01 ಸ್ಥಾನ |
| 3 | ಪರಿಶಿಷ್ಟ ಪಂಗಡ ವರ್ಗದ ಮೀಸಲು ಸ್ಥಾನ | 01 ಸ್ಥಾನ |
| 4 | ಮಹಿಳಾ ವರ್ಗದ ಮೀಸಲು ಸ್ಥಾನ | 02 ಸ್ಥಾನ |
| 5 | ಹಿಂದುಳಿದ ವರ್ಗಗಳ ಪ್ರವರ್ಗ-ಎ ವರ್ಗದ ಮೀಸಲು ಸ್ಥಾನ | 01 ಸ್ಥಾನ |
| 6 | ಹಿಂದುಳಿದ ವರ್ಗಗಳ ಪ್ರವರ್ಗ-ಬಿ ವರ್ಗದ ಮೀಸಲು ಸ್ಥಾನ | 01 ಸ್ಥಾನ |

2. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗದ ಮೀಸಲು ಸ್ಥಾನಕ್ಕೆ ಸ್ಪರ್ದಿಸುವ ಅಭ್ಯರ್ಥಿಗಳು ನಾಮಪತ್ರಗಳ ಜೊತೆಯಲ್ಲಿ ಆ ವರ್ಗಕ್ಕೆ ಸೇರಿದವರೆಂಬ ರುಜುವಾತಿಗಾಗಿ ಸಕ್ಷಮ ಪ್ರಾಧಿಕಾರವು ನೀಡಿದ ಸಿಂಧುತ್ವವುಳ್ಳ ಜಾತಿ ಪ್ರಮಾಣ ಪತ್ರವನ್ನು ಕಡ್ಡಯವಾಗಿ ಸಲ್ಲಿಸತಕ್ಕದ್ದು. ಸದಸ್ಯರು ತಮ್ಮ ನಾಮಪತ್ರದಲ್ಲಿ ತಾವು ಯಾವ ಸ್ಥಾನಕ್ಕೆ ಸ್ಪರ್ದಿಸುತ್ತೀರಿ ಎಂಬುದನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.
3. ಒಬ್ಬ ಸದಸ್ಯ ಒಂದು ವರ್ಗದ ಒಬ್ಬ ಅಭ್ಯರ್ಥಿಯನ್ನು ಮಾತ್ರ ಸೂಚಿಸಲು ಅವಕಾಶವಿರುತ್ತದೆ. ಒಂದಕ್ಕಿಂತ ಹೆಚ್ಚಿನ ಅಭ್ಯರ್ಥಿಗಳನ್ನು ಸೂಚಿಸಿದಲ್ಲಿ ಮೊದಲು ಸೂಚಿಸಿರುವ, ಸಲ್ಲಿಕೆಯಾಗಿರುವ ಅಭ್ಯರ್ಥಿಯ ನಾಮಪತ್ರವನ್ನು ಅಂಗೀಕರಿಸಿ ಉಳಿದ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.
4. ನಿಯಮ 14ಎ ಯ ಪ್ರಕಾರ ಚುನಾವಣೆಗೆ ಸ್ಪರ್ದಿಸುವ ಪ್ರತಿಯೊಬ್ಬ ಅಭ್ಯರ್ಥಿಯು ಬ್ಯಾಂಕಿನ ಹೆಸರಿನಲ್ಲಿ ರೂ. 2000/- ಗಳನ್ನು ಚುನಾವಣಾ ಠೇವಣಿಯಾಗಿ ಪಾವತಿಸಬೇಕು ಆದರೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಮೀಸಲು ಸ್ಥಾನ, ಹಿಂದುಳಿದ ವರ್ಗದ ಮೀಸಲು ಸ್ಥಾನ ಮತ್ತು ಮಹಿಳಾ ಮೀಸಲು ಸ್ಥಾನಕ್ಕೆ ಸ್ಪರ್ದಿಸುವ ಅಭ್ಯರ್ಥಿಗಳು ಚುನಾವಣಾ ಠೇವಣಿಯ ಶೇ 50ರಷ್ಟು ಅಚಿದರೆ ರೂ. 1000/-ಗಳ ಚುನಾವಣಾ ಠೇವಣಿಯನ್ನಾಗಿ ಪಾವತಿಸಬೇಕು.
5. ಚುನಾವಣಾ ಠೇವಣಾತಿ ಹಣವನ್ನು ಬ್ಯಾಂಕಿಗೆ ನಗದು ರೂಪದಲ್ಲಿ ಪಾವತಿಸಿ ಸ್ವೀಕೃತಿ ಪಡೆದು ಹಣ ಸಂದಾಯದ ರಶೀದಿ ನಾಮಪತ್ರದೊಂದಿಗೆ ಲಗತ್ತಿಸಬೇಕು ಅಥವಾ ಪೇ ಆರ್ಡರ್ ಅಥವಾ ಡಿಮ್ಯಾಂಡ್ ಡ್ರಾಪ್ಟ್ ರೂಪದಲ್ಲಿ ಬ್ಯಾಂಕಿನ ಹೆಸರಿನಲ್ಲಿ ಪಡೆದು ನಾಮಪತ್ರದೊಂದಿಗೆ ಡಿಮ್ಯಾಂಡ್ ಡ್ರಾಪ್ಟನ್ನು ಲಗತ್ತಿಸಬೇಕು. ಚುನಾವಣಾ ಠೇವಣಿಯನ್ನು ಸಂದಾಯ ಮಾಡದೆ ಸಲ್ಲಿಸುವ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.

6. ಚುನಾವಣೆಯಲ್ಲಿ ಚಲಾವಣೆಯಾದ ಒಟ್ಟು ಅರ್ಹ ಮತಗಳ 1/6 ರಷ್ಟು ಮತಗಳನ್ನು ಪಡೆಯದ ಸಾಮಾನ್ಯ ಅಭ್ಯರ್ಥಿಗಳ ಹಾಗೂ 1/10 ರಷ್ಟು ಮತಗಳನ್ನು ಪಡೆಯದ ಮೀಸಲು ಸ್ಥಾನಕ್ಕೆ ಸ್ಪರ್ದಿಸಿದ ಅಭ್ಯರ್ಥಿಗಳ ಚುನಾವಣಾ ಠೇವಣಿಯನ್ನು ಬ್ಯಾಂಕಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

7. ನಾಮ ಪತ್ರಗಳ ಪರಿಶೀಲನೆ ಸಮಯದಲ್ಲಿ ಅಭ್ಯರ್ಥಿಗಳು ಹಾಜರಿರಬಹುದು.

8. ಚುನಾವಣೆಗೆ ಸ್ಪರ್ಧಿಸಲು ಇಷ್ಟಪಡುವ ಸದಸ್ಯರು ನಾಮಪತ್ರಗಳನ್ನು ಕಛೇರಿ ವೇಳೆಯಲ್ಲಿ ಬ್ಯಾಂಕಿನಲ್ಲಿ ಅಥವಾ ರಿಟರ್ನಿಂಗ್ ಅಧಿಕಾರಿ ಕಛೇರಿಯಾದ ಸಹಕಾರ ಸಂಘಗಳ ನಿಬಂಧಕರ ಕಛೇರಿ, ಅಲಿ ಅಸ್ಕರ್ ರಸ್ತೆ, ಬೆಂಗಳೂರು-03 ಇಲ್ಲಿ ಪಡೆಯಬಹುದು ಹಾಗೂ ಸಲ್ಲಿಸಬಹುದು.

ಸದಸ್ಯರು ಯಾವುದಾದರೂ ಒಂದು ಸ್ಥಾನಕ್ಕೆ ಮಾತ್ರ ಸ್ಪರ್ದಿಸಲು ಅವಕಾಶವಿರುತ್ತದೆ.

10. 1960ರ ಕರ್ನಾಟಕ ಸಹಕಾರ ಸಂಘಗಳ ನಿಯಮ 14 (ಇ)ರ ಪ್ರಕಾರ ಚುನಾವಣಾ ಅಧಿಕಾರಿಯವರು ಚುನಾವಣೆಗೆ ಸ್ಪರ್ದಿಸಿದ ಅಭ್ಯರ್ಥಿಗಳಿಗೆ (ರಾಷ್ಟೀಯ ಪಕ್ಷಗಳ ಮತ್ತು ಕರ್ನಾಟಕ ರಾಜ್ಯದ ಪ್ರಾದೇಶಿಕ ಪಕ್ಷಗಳ ಚಿಹ್ನೆಗಳನ್ನು ಹೊರತುಪಡಿಸಿ) ಚುನಾವಣಾ ಚಿಹ್ನೆ ನೀಡಲು ಅಧಿಕಾರ ಹೊಂದಿರುತ್ತಾರೆ. ಚಿಹ್ನೆ ಹಂಚಿಕೆಯಲ್ಲಿ ರಿಟರ್ನಿಂಗ್ ಅಧಿಕಾರಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

11. ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ದಿನದಿಂದ ಚುನಾವಣೆ ಮುಗಿಯುವವರೆಗೆ ಸಾರ್ವಜನಿಕ ರಜಾ ದಿನಗಳಂದು ಸಹ ಬ್ಯಾಂಕಿನ ಕಛೇರಿಯು ತೆರೆದಿರುತ್ತದೆ.

12. ಸದಸ್ಯರು ಮತದಾನದಲ್ಲಿ ಭಾಗವಹಿಸಲು ಬ್ಯಾಂಕ್ ನೀಡಿರುವ ಗುರುತಿನ ಕಾರ್ಡನ್ನು ಕಡ್ಡಾಯವಾಗಿ ಹಾಜರಿಪಡಿಸಬೇಕು.

13. ಸಹಕಾರ ಚುನಾವಣಾ ಪ್ರಾಧಿಕಾರವು ಅನುಮೋದಿಸಿರುವ ಅರ್ಹ ಮತದಾರರ ಪಟ್ಟಿಯಲ್ಲಿನ ಸದಸ್ಯರು ಮಾತ್ರ ಚುನಾವಣೆಯಲ್ಲಿ ಸ್ಪರ್ದಿಸಲು ಮತ್ತು ಮತ ಚಲಾಯಿಸಲು ಅರ್ಹರಿರುತ್ತಾರೆ.

14. ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಪ್ರಾಧಿಕಾರ ಹೊರಡಿಸಿರುವ ನೀತಿ ಸಂಹಿತೆಯನ್ನು ಪಾಲಿಸತಕ್ಕದ್ದು.

15. ಪೂರ್ಣ ಚುನಾವಣಾ ಪ್ರಕ್ರಿಯೆಯನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ರೀತ್ಯಾ ನಡೆಸಲಾಗುವುದು.

ಸ್ಥಳ : ಬೆಂಗಳೂರು
ದಿನಾಂಕ : 06 - 01-2025

(ಬಿ.ಹೆಚ್. ಬಾಬು ರೆಡ್ಡಿ)
ರಿಟರ್ನಿಂಗ್ ಅಧಿಕಾರಿ
ಅರ್ಕಾವತಿ ಸಹಕಾರ ಬ್ಯಾಂಕ್ ಲಿ., ಬೆಂಗಳೂರು
ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು